


ಪ್ಯಾಸ್ಟರ್ ಟೋನಿ ಅಲಾಮೊ ಅಲಾಮೊ ಕ್ರೈಸ್ತಮತೀಯ ರಾಷ್ಟ್ರ ಸಂಪುಟ 21900

# ಸಂಕಟ ಆರಂಭವಾಗಿದೆ

**ಟೋನಿ ಅಲಾಮೊ ಅವರಿಂದ**


ಪ್ಯಾಸ್ಟರ್ ಟೋನಿ ಅಲಾಮೊ ಮತ್ತು ಟಿ. ರಾಕಿ III/ದಿ ಎ-ಟೀಮ್

"ಯೇಸು ಬೋಧನೆ ಮಾಡುತ್ತಾ ಇನ್ನೂ ಸಾಮ್ಯರೂಪವಾಗಿ ಅವರಿಗೆ ಹೇಳಿದ್ದೇನೆಂದರೆ – ಪರಲೋಕರಾಜ್ಯವು ಮಗನಿಗೆ [ಯೇಸು] ಮದುವೆ ಮಾಡಿದ ನಿ-ರ್ದಿಷ್ಟ ಅರಸನಿಗೆ [ತಂದೆಯಾದ ದೇವರು] ಹೋಲಿಕೆಯಾಗಿದೆ. ಅವನು ಮದುವೆಗೆ ಹೇಳಿಸಿಕೊಂಡವರನ್ನು ಕರೆಯುವದಕ್ಕೆ ತನ್ನ ಆಳುಗಳನ್ನು ಕಳುಹಿಸಲು ಬರುವ-ದಕ್ಕೆ ಅವರಿಗೆ ಮನಸ್ಸಿರಲಿಲ್ಲ. ತಿರುಗಿ ಬೇರೆ ಆಳುಗಳನ್ನು ಕರೆದು – ನೀವು ಊಟಕ್ಕೆ ಹೇಳಿಸಿಕೊಂಡವರ ಬಳಿಗೆ ಹೋಗಿ – ಇಗೋ, ಅಡಿಗೆ ಸಿದ್ಧವಾಗಿದೆ; ನನ್ನ ಹೋರಿಗಳನ್ನೂ ಕೊಬ್ಬಿದ ಪಶುಗ-ಳನ್ನೂ ಕೊಯ್ಯಿಸಿದ್ದೇನೆ; ಎಲ್ಲಾ ಸಿದ್ಧ-ವಾಗಿದೆ; ಮದುವೆಯ ಊಟಕ್ಕೆ ಬನ್ನಿ-ರೆಂಬುದಾಗಿ ಅವರಿಗೆ ಹೇಳಿರೆಂದು ಅಪ್ಪಣೆ ಕೊಟ್ಟು ಕಳುಹಿಸಿದನು.

"ಆದರೆ ಅವರು ಅಲಕ್ಷ್ಯ ಮಾಡಿ ಒಬ್ಬನು ತನ್ನ ಹೊಲಕ್ಕೆ, ಇನ್ನೊಬ್ಬನು ತನ್ನ ವ್ಯಾಪಾರಕ್ಕೆ ಹೋಗಿಬಿಟ್ಟನು; ಉಳಿದವರು ಅವನ ಆಳುಗಳ-ನ್ನು ಹಿಡಿದು ಬೈದು ಕೊಂದುಹಾಕಿದರು. [ಇದು, ಕ್ರೈಸ್ತಮತೀಯ ಶಿಷ್ಯರು ಅನ್ಯಜನಾಂಗದವರಿಗೆ ಸಾಕ್ಷಿ ಹೇಳುವುದರ ಬಗ್ಗೆ, ಬೆಂಕಿಯ ಕೆರೆಯಿಂದ ರಕ್ಷಣೆ ಪಡೆಯಲು ಮತ್ತು ಎಲ್ಲಾ ರೀತಿಗಳ-ಲ್ಲಿ ದೇವರ ಅನುಗ್ರಹ ಪಡೆಯಲು ಅವರನ್ನು ಆಹ್ವಾನಿಸುವುದರ ಬಗ್ಗೆ, ಆದರೆ ಹೆಚ್ಚಿನ ಜನರು ಅದನ್ನು ನಿರಾಕರಿಸುತ್ತಾರೆ, ಮಾತ್ರವಲ್ಲದೆ, ಆ ದುಷ್ಟರನ್ನು ಆಹ್ವಾನಿಸುತ್ತಿರುವವರಿಗೆ ಹಿಂಸೆ ಕೊಟ್ಟು ಅವರ ಕೊಲೆ ಮಾಡುವುದರ ಬಗ್ಗೆ ಹೇಳುವ ಒಂದು ದೃಷ್ಟಾಂತ ಕಥೆಯಾಗಿದೆ.]

"ಅರಸನು ಸಿಟ್ಟುಗೊಂಡು ತನ್ನ ದಂ-ಡುಗಳನ್ನು ಕಳುಹಿಸಿ, ಆ ಕೊಲೆಗಾರರನ್ನು ನಾಶಮಾಡಿ ಅವರ ಪಟ್ಟಣವನ್ನು ಸುಟ್ಟು-ಬಿಟ್ಟನು. [ಇದು ಹೊಸ ಒಡಂಬಡಿಕೆಯಲ್ಲಿ ದೇವರ ಕೋಪ!] ಆಗ ತನ್ನ ಆಳುಗಳಿಗೆ – ಮದುವೆಗೆ ಸಿದ್ಧವಾಗಿದೆ, ಸರಿ, ಆದರೆ ಕರೆ-ಯಲ್ಪಟ್ಟವರು ಯೋಗ್ಯರಾಗಿರಲಿಲ್ಲ. ನೀವು ಈಗ ನಾಲ್ಕು ಹಾದಿಗಳು ಕೂಡುವ ಸ್ಥಳಗ-ಳಿಗೆ ಹೋಗಿ ಕಂಡವರನ್ನೆಲ್ಲಾ ಮದುವೆಯ ಊಟಕ್ಕೆ ಕರೆಯಿರಿ ಎಂದು ಹೇಳಿದನು [ನಾವು ಇದನ್ನೆ ಮಾಡುವುದು. ಇದೇ ನಮ್ಮನ್ನು ಜೈ-ಲಿನಲ್ಲಿ ಹಾಕುವಷ್ಟು, ನಮ್ಮ ಮಕ್ಕಳನ್ನು ಕದಿಯುವಷ್ಟು, ಮತ್ತು ನಮ್ಮನ್ನು ಅಪನಿಂದೆ ಮಾಡುವಷ್ಟು ಸೈತಾನನನ್ನು ಕೋಪಗೊಳಿ-ಸುತ್ತದೆ]. ಆ ಆಳುಗಳು ಹಾದಿಗಳಿಗೆ ಹೋಗಿ ಕೆಟ್ಟವರು ಒಳ್ಳೆಯವರು ಎನ್ನದೇ ಕಂಡವ-ರನ್ನೆಲ್ಲಾ ಕೂಡಿಸಿ ಕರೆದುಕೊಂಡು ಬಂದರು. ಹೀಗೆ ಮನೆತುಂಬ ಊಟಕ್ಕೆ ಕೂತರು. [ಯೇಸು ಮತ್ತು ಆತನ ಅನುಯಾಯಿಗಳ ವಿರುದ್ಧ ಸುಳ್ಳು ಹೇಳಲು ಪ್ರತಿಯೊಂ-ದು ನಿಜವಾದ ಸುವಾರ್ತಾ ಬೋಧನಾ ಚರ್ಚಿನಲ್ಲಿ ಕೆಲವರು ಕೆಟ್ಟವರು ಇರು-ತ್ತಾರೆ ಎಂದು ಸೈತಾನನ ಸರ್ಕಾರವಾದ ಪಿಶಾಚನಿಗೆ ತಿಳಿದಿದೆ.]

"ಆ ಮೇಲೆ ಅರಸನು ಕೂತವರ-ನ್ನು ನೋಡುವದಕ್ಕೆ ಒಳಕ್ಕೆ ಬರಲಾಗಿ ಮದುವೇ ಬಟ್ಟೆಯನ್ನು ಹಾಕಿಕೊ-ಳ್ಳದ ಒಬ್ಬನನ್ನು ಕಂಡು ಅವನ-ನ್ನು – ಏನಪ್ಪಾ, ಮದುವೆಯ ಬಟ್ಟೆ ಇಲ್ಲದೆ ನೀನಿಲ್ಲಿ ಹೇಗೆ ಒಳಕ್ಕೆ ಬಂದಿ ಎಂದು ಕೇಳಲು ಅವನು ಸುಮ್ಮನಿದ್ದನು [ಬೇರೆ ಮಾತಿನಲ್ಲಿ ಹೇಳುವುದಾದರೆ, ನೀವು ಏಕೆ ರಕ್ಷಿತರಾಗಿಲ್ಲ, ಯೇಸುವಿನ ರಕ್ತದಲ್ಲಿ ಮಿಂದಿಲ್ಲ, ಬಿಳಿ ಬಟ್ಟೆಯ-ನ್ನು ಧರಿಸಿಲ್ಲ, ಪಾಪ ಮುಕ್ತರಾಗಿಲ್ಲ?] ಆ ಮೇಲೆ ಅರಸನು ಸೇವಕರಿಗೆ – ಅವನ ಕೈಕಾಲು ಕಟ್ಟಿ ಅವನನ್ನು ಹೊರಗೆ ಕತ್ತಲೆಗೆ ನೂಕಿರಿ ಎಂದು ಹೇಳಿದನು. ಅಲ್ಲಿ ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ ಇರುವವು" (ಮತ್ತಾಯ 22:1-13). ರಕ್ಷಿತರಾಗದ ಎಲ್ಲರಿಗೆ – ಯೋಗ್ಯರಲ್ಲದ ಎಲ್ಲರಿಗೆ – ಏನಾಗಲಿದೆ ಎಂದು ಈ ದೃಷ್ಟಾಂತಕಥೆಯು ಮುನ್ಸೂಚನೆ ನೀಡುತ್ತಿದೆ.[1]

ತಾನು ಯೆಹೂದ್ಯರನ್ನು ಅವರ ಸ್ವದೇಶ-ಕ್ಕೆ ಹಿಂದಕ್ಕೆ ಕರೆತಂದು ಅವರನ್ನು ಅಲ್ಲಿ ಶಾ-ಶ್ವತವಾಗಿ ನೆಲೆಗೊಳಿಸುವುದಾಗಿ ಹೇಳಿದಾಗ, ದೇವರು ಹಾಗೆ ಮಾಡಿದರು (ಮೇ 14, 1948, ಯೆಹೆಜ್ಕೇಲನು 37:21-28).[2] ಆಯ್ದ ಯೆಹೂದ್ಯರನ್ನು, ನಮ್ಮಲ್ಲಿ ಒಂದು ನೂರ ನಲ್ವತ್ತನಾಲ್ಕು ಸಾವಿರ ಮಂದಿಯನ್ನು

(ಪುಟ 2ರಲ್ಲಿ ಮುಂದುವರಿದಿದೆ)

**1** ಮತ್ತಾಯ 8:11-12, 13:41-42, 49-50, 24:48-51, 25:1-13, 31-46, ಲೂಕ 9:59-62, 14:16-33, ಯೋಹಾನ 3:3-8, ಪ್ರಕಟನೆ 16:15 **2** ಧರ್ಮೋಪದೇಶಕಾಂಡ 30:1-5, ಯೆಶಾಯ 11:10-12, 27:12-13, 43:1-6, ಯೆರೆಮೀಯ 23:7-8, 32:36-44, ಯೆಹೆಜ್ಕೇಲನು 11:16-20, 20:40-44, 34:11-16, 36:16-38, 37:15-28, 39:23-29, ಹೋಶೇಯ 1:8-11, ಆಮೋಸ 9:14-15, ಮೀಕ 4:6-8. ಚೆಫನ್ಯ 3:16-20, ಜೆಕರ್ಯ 8:1-15

# ಸಂಕಟ ಆರಂಭವಾಗಿದೆ

(ಪುಟ 1 ರಿಂದ ಮುಂದುವರಿದಿದೆ)

ರಕ್ಷಿಸುವುದಾಗಿ ದೇವರು ಹೇಳಿದರು, ಮತ್ತು ಕೊನೆಯ ದಿನಗಳಲ್ಲಿ ನಾವು ಅಷ್ಟು ಮಂದಿ ಸ್ನಾನಿಕನಾದ ಯೋಹಾನರು ಇರುವೆವು. ಆತ ಅದನ್ನು ಮಾಡುತ್ತಿದ್ದಾರೆ! (ಪ್ರಕಟನೆ 7:2-8, 14:1-5).

ಒಂದು-ವಿಶ್ವ ಸರ್ಕಾರ, ಮಾಧ್ಯಮ, ಮತ್ತು ಚರ್ಚ್ ಇರುವುದು, ಮತ್ತು ಅವುಗಳಿಗೆ ಸೈತಾನನಿಂದ ಶಕ್ತಿ ದೊರಕುವುದು ಎಂದು ಆತ ಹೇಳಿದನು.[3] ದೇವರು ಹೇಳಿದಂತೆಯೆ ನಡೆಯುತ್ತಿದೆ ಎಂದು ನೀವು ನೋಡಬಹುದು (ಪ್ರಕಟನೆ 13:1-7). ಸೈತಾನನ ಬಾಯಿ – ಮಾಧ್ಯಮ – ಪೈಶಾಚಿಕ ಒಂದು-ವಿಶ್ವ ಸರ್ಕಾರ, ಕುಪಂಥವು, ಸೈತಾನನ ಜೊತೆಗೂಡಿ ದೇವರ, ಕ್ರಿಸ್ತರ, ದೇವರ ಪದದ, ಮತ್ತು ನಿಜವಾದ ಕ್ರೈಸ್ತಮತೀಯರ ವಿರುದ್ಧ ಯುದ್ಧ ಮಾಡುವುದು ಎಂದು ಆತ ಹೇಳಿದರು; ನಿಮ್ಮ ಕಣ್ಣ ಮುಂದೆಯೆ ಅದು ನಡೆಯುತ್ತಿರುವುದನ್ನು ನೀವು ನೋಡಬಹುದು.[4] ದೇವದೂಷಣೆಗಳು, ಬಂಧನಗಳು, ಸುಳ್ಳು ಆಪಾದನೆಗಳು, ಇತ್ಯಾದಿಗಳೊಂದಿಗೆ ಪಟ್ಟಿ ಮುಗಿಯುವುದೇ ಇಲ್ಲ. ಆದ್ದರಿಂದ ತೀರಿಕೆಯ ದಿನ ಹತ್ತಿರದಲ್ಲೇ ಇದೆ, ಬೇಗನೆ ಬರಲಿದೆ ಎಂದು ನಿಮಗೆ ಖಂಡಿತವಾಗಿ ತಿಳಿದಿರಬಹುದು.[5] ನೀವು ನಿಮ್ಮ ಮದುವೆಯ ಬಟ್ಟೆಗಳಿಲ್ಲದೆ ಇರುವುದಿಲ್ಲ ಎಂದು ನಾನು ನಿರೀಕ್ಷಿಸುತ್ತೇನೆ.

ಸದ್ಯದಲ್ಲೇ ನಡೆಯಲಿರುವ ಮತ್ತೊಂದು ಭವಿಷ್ಯವಾಣಿ ಜೆಕರ್ಯನ ಪುಸ್ತಕದಿಂದ ಇಲ್ಲಿದೆ: "ಆಹಾ! ನಾನು ಯೆರೂಸಲೇಮನ್ನು ಸುತ್ತಣ ಸಕಲ ಜನಾಂಗಗಳಿಗೆ ಅಮಲೇರಿಸಿ ಓಲಾಡಿಸುವ ಬೋಗುಣಿಯನ್ನಾಗಿ ಮಾಡುವೆನು; ಯೆರೂಸಲೇಮಿಗೆ ಮುತ್ತಿಗೆ ಹಾಕುವಾಗ ಯೆಹೂದಕ್ಕೂ ಇಕ್ಕಟ್ಟಾಗುವದು. ಆ ದಿನದಲ್ಲಿ ನಾನು ಯೆರೂಸಲೇಮನ್ನು ಸಮಸ್ತ ಜನಗಳಿಗೂ ಭಾರೀ ಬಂಡೆಯನ್ನಾಗಿ ಮಾಡುವೆನು; ಅದನ್ನೆತ್ತುವವರೆಲ್ಲರಿಗೂ ಕಡುಗಾಯವಾಗುವದು; ಲೋಕದ ಸಕಲ ರಾಜ್ಯಗಳು ಅದನ್ನೆತ್ತಿ ಹಾಕಲು ಕೂಡಿ ಬರುವವು.

"ಯೆಹೋವನು ಇಂತೆನ್ನುತ್ತಾನೆ – ಆ ದಿನದಲ್ಲಿ ನಾನು ಎಲ್ಲಾ ಕುದುರೆಗಳಿಗೆ [ಎಲ್ಲಾ ದೇಶಗಳಿಗೆ] ತಬ್ಬಿಬ್ಬನ್ನು ಉಂಟುಮಾಡುವೆನು, ಸವಾರರನ್ನು [ದೇಶಗಳ ನಾಯಕರನ್ನು] ಭ್ರಮೆಗೊಳಿಸುವೆನು [ಬುದ್ಧಿ ಭ್ರಮಣೆಗಳು, ಹುಚ್ಚು ಹಿಡಿದ, ಹುಚ್ಚಿನಿಂದ, ಅವರು ಖಂಡಿತವಾಗಿ ಇದು ಇರುವಂತೆ]; ಯೆಹೂದ ವಂಶವನ್ ಕಟಾಕ್ಷಿಸಿ ಜನಾಂಗಗಳ [ಪ್ರತಿಯೊಂದು ದೇಶದ] ಅಶ್ವಗಳನ್ನೆಲ್ಲಾ ಕುರುಡು ಮಾಡುವೆನು [ಮತ್ತು ಅವರು ಕುರುಡಾಗಿದ್ದಾರೆ].

"ಆಗ ಯೆಹೂದದ ಕುಲಪತಿಗಳು ಮನಸ್ಸಿನೊಳಗೆ – ಯೆರೂಸಲೇಮಿನವರು ತಮ್ಮ ದೇವರೂ ಸೇನಾಧೀಶ್ವರನೂ ಆದ ಯೆಹೋವನಲ್ಲಿ ಬಲಗೊಂಡು ನಮಗೆ ತ್ರಾಣವಾಗಿದ್ದಾರೆ ಅಂದುಕೊಳ್ಳುವರು. ಆ ದಿನದಲ್ಲಿ ನಾನು ಯೆಹೂದದ ಕುಲಪತಿಗಳನ್ನು ಸೌದೆಯ ಮಧ್ಯದಲ್ಲಿನ ಅಗ್ಗಿಷ್ಟಿಕೆಯನ್ನಾಗಿಯೂ ಸಿವುಡುಗಳ ನಡುವಣ ಪಂಜನ್ನಾಗಿಯೂ ಮಾಡುವೆನು; ಅವರು ಸುತ್ತಣ ಜನಾಂಗಗಳನ್ನೆಲ್ಲಾ ಎಡಬಲಗಳಲ್ಲಿ ನುಂಗಿಬಿಡುವರು; ಯೆರೂಸಲೇಮಿನವರು ತಮ್ಮ ಸ್ಥಳವಾದ ಯೆರೂಸಲೇಮಿನಲ್ಲೇ ಇನ್ನು ವಾಸಿಸುವರು. ದಾವೀದ ವಂಶದವರ ಮಹಿಮೆಯೂ ಮತ್ತು ಯೆರೂಸಲೇಮಿನಲ್ಲಿರುವವರ ಮಹಿಮೆಯೂ ಯೆಹೂದದ ಮಹಿಮೆಯನ್ನು ಮೀರದಂತೆ ಯೆಹೋವನು ಯೆಹೂದದ ಪಾಳೆಯಗಳನ್ನು ರಕ್ಷಿಸುವನು; ಆ ದಿನದಲ್ಲಿ ಯೆಹೋವನು ಯೆರೂಸಲೇಮಿನವರನ್ನು ಸುತ್ತಲೂ ಕಾಪಾಡುವನು; ಅವರೊಳಗೆ ಈಗಿನ ಕುಂಟನು ಆ ದಿನದಲ್ಲಿ ದಾವೀದನಂತಿರುವನು; ದಾವೀದ ವಂಶವು ದೇವರಂತೆ, ಯೆಹೋವನ ದೂತನ ಹಾಗೆ ಅವರಿಗೆ ಮುಂದಾಳಾಗುವದು. ಯೆರೂಸಲೇಮಿನ ಮೇಲೆ ಬೀಳುವ ಎಲ್ಲಾ ಜನಾಂಗಗಳ ಧ್ವಂಸಕ್ಕೆ ಆ ದಿನದಲ್ಲಿ ಕೈಹಾಕುವೆನು" (ಜೆಕರ್ಯ 12:2-9).[6]

"ಯೆರೂಸಲೇಮಿನ ಮೇಲೆ ಯುದ್ಧ ಮಾಡಿದ ಸಕಲ ಜನಾಂಗಗಳಿಗೂ ಯೆಹೋವನು ಈ ವ್ಯಾಧಿಯನ್ನು ತಗಲಿಸುವನು – ಹೆಜ್ಜೆಯ ಮೇಲೆ ನಿಂತ ಹಾಗೆಯೇ ಅವರ ಮಾಂಸವು ಕೊಳೆತುಹೋಗುವದು, ಕಣ್ಣು ಗುಣಿಯಲ್ಲೇ ಇಂಗುವದು, ನಾಲಿಗೆಯು ಬಾಯಲ್ಲೇ ಕ್ಷಯಿಸುವದು" (ಜೆಕರ್ಯ 14:12).

ಹಳೆ ಒಡಂಬಡಿಕೆಯಲ್ಲಿ ಪ್ರಭುವಿನ ಬರುವಿಕೆಯ ಬಗ್ಗೆ ಪೂರೈಸಲಾದ ನೂರಾರು ಭವಿಷ್ಯವಾಣಿಗಳ ಬಗ್ಗೆ ನಾನು ಒಂದು ಪುಸ್ತಕವನ್ನು ಬರೆದಿದ್ದೇನೆ. ಪ್ರಭುವಿನ ಶೀಘ್ರ ಬರುವಿಕೆಯ ಬಗ್ಗೆ ನಾನು ಇನ್ನೂ ಹೆಚ್ಚು ಬರೆಯಲು ಬಯಸುತ್ತೇನೆ. ಆತನ ಬರುವಿಕೆಯು ಶೀಘ್ರದಲ್ಲೇ ಆಗಲಿದೆ ಎಂದು ರಕ್ಷಣೆ ಹೊಂದದ ಜನರಿಗೂ ತಿಳಿದಿದೆ. ದೇವರೊಂದಿ-

(ಪುಟ 4ರಲ್ಲಿ ಮುಂದುವರಿದಿದೆ)

3 ದಾನಿಯೇಲನು 2:28-45, 7:7-25, ಪ್ರಕಟನೆ ಅಧ್ಯಾಯ 13, 14:8-11, ಅಧ್ಯಾಯ 17-18 4 ದಾನಿಯೇಲನು 2:40, 7:20-25, ಪ್ರಕಟನೆ 12:9-17, 13:3-17, 17:11-15, 18:24, 19:1-2 5 ಲೂಕ 21:7-36, 1 ಪೇತ್ರನು 4:7, 2 ಪೇತ್ರನು 3:3-12, ಯೂದನು 3-21, ಪ್ರಕಟನೆ 1:1-3, 22:10-12

6 ಯೆಹೆಜ್ಕೇಲನು ಅಧ್ಯಾಯ 38-39

## ಮಲಾವಿ

(ಚಿಚೇವದಿಂದ ಅನುವಾದಿಸಲಾಗಿದೆ)

ಪ್ರೀತಿಯ ಪ್ಯಾಸ್ಟರ್ ಟೋನಿ ಅಲಾಮೊ,

ನಿಮಗೆ ಈ ಪತ್ರವನ್ನು ಬರೆಯಲು ನನಗೆ ಸಂತೋಷವಾಗುತ್ತದೆ. ಸಂಪೂರ್ಣ ಜಗತ್ತಿನಲ್ಲಿ ಆತನ ಸೇವಕನಾದ ಟೋನಿ ಅಲಾಮೊ ಮಾಡುತ್ತಿರುವ ಎಲ್ಲಾ ಕೆಲಸಕ್ಕಾಗಿ ಸ್ವರ್ಗದ ದೇವರಿಗೆ ಸ್ತೋತ್ರ ಮಾಡೋಣ. ಇಲ್ಲಿ ಮಲಾವಿಯಲ್ಲಿ, ದೇವರ ಧರ್ಮದೂತರಾದ ಟೋನಿ ಅಲಾಮೊ ಅವರು ಬರೆದಿರುವ ವಿವಿಧ ಸಾಹಿತ್ಯವನ್ನು ವಿತರಿಸುವ ಕಾರಣ ನಾಮಿಟಾಂಬೊ ಮಿನಿಸ್ಟ್ರೀಸ್ ಬೆಳೆದಿದೆ.

ಮತ್ತಾಯ 28 ಶ್ಲೋಕ 19-20, ಮಾರ್ಕ 16 ಶ್ಲೋಕ 15-16ರಲ್ಲಿ ಬೈಬಲ್ ಹೇಳಿರುವಂತೆ ಸಂಪೂರ್ಣ ಲೋಕಕ್ಕೆ ಸಂದೇಶವನ್ನು ಸಾರಲು ನೀವು ಕಳುಹಿಸುವ ಎಲ್ಲದಕ್ಕಾಗಿ ಮಲಾವಿಯಲ್ಲಿ ಟೋನಿ ಅಲಾಮೊ ಚರ್ಚ್ ನ ಪ್ಯಾಸ್ಟರ್ ಆದ ನಾನು ಕೃತಜ್ಞನಾಗಿದ್ದೇನೆ.

ದ ಮೆಸ್ಸೈಅ ದ ಅನೇಕ ಪುಸ್ತಕಗಳಿಗಾಗಿ ಕೂಡ ನಿಮಗೆ ಧನ್ಯವಾದಗಳು. ಹೊಸದಾಗಿ ಬಂದವರು ಅವುಗಳನ್ನು ಓದಿದರು ಮತ್ತು ಅವರಲ್ಲಿ ಅನೇಕರು ನಮ್ಮೊಂದಿಗಿದ್ದಾರೆ. ಪ್ರಭು ನಿಮ್ಮನ್ನು ಆಶೀರ್ವದಿಸಲಿ. ಆಮೆನ್.

ಪ್ರಭುವಿನ ಸೇವಕ,

ಪ್ಯಾಸ್ಟರ್ ಚಾರ್ಲ್ಸ್ ಮಬೂಲ್ಲ ನಾಮಿಟಾಂಬೊ, ಮಲಾವಿ

## ಫೇಸ್ ಬುಕ್ ನಿಂದ

"ನಿಮ್ಮ ಮನಸ್ಸನ್ನು ಹೇಗೆ ಕಾಪಾಡಿಕೊಳ್ಳುವುದು ಎಂಬ ರಹಸ್ಯ" ಎಂಬ ಸಂದೇಶವನ್ನು ಕುರಿತಂತೆ, ಕೆಜಿಜೆ ಹೀಗೆಂದು ಬರೆದರು: "ನಾನು ಈ ಸಂಪೂರ್ಣ ದೀರ್ಘ ಲೇಖನವನ್ನು ಓದಿದೆನು. ಓದಲು ಮಾತ್ರವಲ್ಲದೆ ನಾನು ಏನನ್ನು ಓದುತ್ತಿದ್ದೇನೆ ಎಂಬುದರ ಬಗ್ಗೆ ಆಲೋಚಿಸಲು ಆಗಾಗ್ಗ ನಿಲ್ಲಲು ಸ್ವಲ್ಪ ಸಮಯ ಬೇಕಾಯಿತು. ಇದನ್ನು ಓದಲು ಎಲ್ಲರಿಗೂ ಕಡ್ಡಾಯ ಮಾಡಬೇಕು! ನೀವು ಇದಕ್ಕಾಗಿ ಕೊಟ್ಟಿರುವ ಸಮಯ ಮತ್ತು ಶ್ರಮಕ್ಕಾಗಿ ನಿಮಗೆ ಧನ್ಯವಾದಗಳು. ಯೇಸು ಕ್ರಿಸ್ತರು ನಮ್ಮ ಪ್ರಭು ಮತ್ತು ರಕ್ಷಕರು. ಆಮೆನ್."

"ತೊಂದರೆಗಳು?" ಎಂಬ ಸಂದೇಶವನ್ನು ಕುರಿತಂತೆ, ಆಲಬಾಮಾದ ಬರ್ಮಿಂಗ್ ಹ್ಯಾಂನಿಂದ ಡಿ.ಡಬ್ಲ್ಯು. ಹೀಗೆಂದು ಬರೆದರು: "ದೇವರ ಕೋಪದ ಬಗ್ಗೆ ಕೇಳಲು ಯಾರೂ ಬಯಸುವುದಿಲ್ಲ, ಆತನ ಪ್ರೀತಿ ಮತ್ತು ಅನುಗ್ರಹಗಳ ಬಗ್ಗೆ ಮಾತ್ರ ಕೇಳಲು ಬಯಸುತ್ತಾರೆ. ಬೋಧನೆಯನ್ನು ಮುಂದುವರಿಸಿ, ಸಹೋದರ."

## ಕ್ಯಾಲಿಫೋರ್ನಿಯಾ

ಪ್ರೀತಿಯ ಪ್ಯಾಸ್ಟರ್ ಅಲಾಮೊ,

ನನ್ನ ಸೋದರಸಂಬಂಧಿ ತಮ್ಮ ಚ್ಯಾಡ್, ಮದ್ಯಪಾನದಿಂದ ತೀವ್ರವಾಗಿ ಹಾನಿಗೊಂಡಿದ್ದ ಯಕೃತ್ತಿನಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದನು ಮತ್ತು ನಾವು ಅವನಿಗಾಗಿ ಪ್ರಾರ್ಥಿಸುತ್ತಿದ್ದೆವು. ಅವನು ನಿನ್ನೆ ಸಾವನ್ನಪ್ಪಿದನು. ಸುಮಾರು ಒಂದೂವರೆ ವಾರಗಳ ಹಿಂದೆ, ಅವನನ್ನು ಪಶ್ಚಾತ್ತಾಪ ಮತ್ತು ರಕ್ಷಣೆಯತ್ತ ಕರೆದೊಯ್ಯಲು ನನಗೆ ಸಾಧ್ಯವಾಯಿತು.

ನನ್ನ ಸೋದರ ಸಂಬಂಧಿ ತಮ್ಮನೊಂದಿಗೆ ನಾನು ಮಾತನಾಡುವುದನ್ನು ನನ್ನ ಸೋದರತ್ತೆ ತಡೆಯುತ್ತಿದ್ದರು, ಏಕೆಂದರೆ ಆಕೆಗೆ ದೇವರ ಪದದಲ್ಲಿ ನಂಬಿಕೆಯಿಲ್ಲ. ನನ್ನ ತಾಯಿ ನನಗೆ ಕರೆ ಮಾಡಿ, ನನ್ನ ಸಹೋದರ ಕೋಮಾದಲ್ಲಿದ್ದಾನೆ, ಸಾವಿಗೆ ಸಮೀಪದಲ್ಲಿದ್ದಾನೆ ಎಂದು ನನಗೆ ತಿಳಿಸಿದರು.

ಅವನ ಕೋಣೆಯಲ್ಲಿ ಫೋನ್ ಇಲ್ಲ, ಆದ್ದರಿಂದ ನಾನು ಅವನೊಂದಿಗೆ ಮಾತನಾಡಲು ಯಾವುದೇ ಮಾರ್ಗವಿಲ್ಲವೆಂದು ನನ್ನ ಸೋದರತ್ತೆ ನನಗೆ ಹೇಳುತ್ತಿದ್ದರು. (ಅವನ ಕೋಣೆಯಲ್ಲಿ ಸೆಲ್ ಫೋನ್ ಗಳಿಗೆ ಅನುಮತಿ ಇರಲಿಲ್ಲ.) ಆದ್ದರಿಂದ ನಾನು ನೇರವಾಗಿ ಆಸ್ಪತ್ರೆಗೆ ಕರೆ ಮಾಡಿದೆನು, ಮತ್ತು ಅವರು ನನಗೆ ಅವನ ಕೋಣೆಯ ಫೋನ್ ಗೆ ಸಂಪರ್ಕ ಕಲ್ಪಿಸಿದರು. ನನ್ನ ಸೋದರತ್ತೆ ಕರೆ ಸ್ವೀಕರಿಸಿದರು. ಫೋನ್‌ಅನ್ನು ಚ್ಯಾಡ್ ನ ಕಿವಿಯ ಬಳಿ ಇಡಲು ನಾನು ಆಕೆಗೆ ಹೇಳಿದನು. ನೀವು ಪ್ರಾರ್ಥನಾಸಭೆಯಲ್ಲಿ ಹೇಳಿದಂತೆ, ಅವನಿಗೆ ನಾನು ಹೇಳಿದ್ದು ಕೇಳಿಸುತ್ತದೆ ಎಂದು ನನಗೆ ತಿಳಿದಿತ್ತು. ಮತ್ತು, ನೀವು ನಮಗೆ ತರಬೇತಿ ನೀಡಿದಂತೆ, ಚ್ಯಾಡ್ ನ ಕೈ ಹಿಡಿದುಕೊಳ್ಳಲು ನಾನು ನನ್ನ ಸೋದರತ್ತೆಗೆ ಹೇಳಿದೆನು ಮತ್ತು ಅವನಿಗೆ ನಾನು ಹೇಳಿದ್ದು ಕೇಳಿಸಿದರೆ ಆಕೆಯ ಕೈ ಅಮುಕಲು ನಾನು ಅವನಿಗೆ ಹೇಳಿದೆನು.

ನಾನು ಅವನೊಂದಿಗೆ ಮಾತನಾಡಲು ಆರಂಭಿಸಿದೆನು ಮತ್ತು ಕೂಡಲೆ, ನನ್ನ ಸೋದರತ್ತೆ ಉತ್ಸಾಹದಿಂದ, “ಅವನು ನನ್ನ ಕೈ ಅಮುಕುತ್ತಿದ್ದಾನೆ!” ಎಂದು ಹೇಳಿದರು. ನಾನು ಅವನಿಗೆ, ಅವನಿಗಾಗಿ ಯೇಸುವಿನ ರಕ್ತ ಚೆಲ್ಲಲ್ಪಟ್ಟ ಬಗ್ಗೆ, ರಕ್ಷಣೆಯ ಯೋಜನೆಯ ಬಗ್ಗೆ, ಮತ್ತು ಪರಲೋಕದ ಬಗ್ಗೆ ಸಾಕ್ಷಿ ಹೇಳಲು ತೊಡಗಿದೆನು. ಅವನಿಗೆ ಮಾತನಾಡಲು ಸಾಧ್ಯವಿಲ್ಲದಿದ್ದರಿಂದ ತನ್ನ ಹೃದಯದಲ್ಲೆ ಪಾಪಿಯ ಪ್ರಾರ್ಥನೆಯನ್ನು ಹೇಳಲು ನಾನು ನನ್ನ ಸಹೋದರನಿಗೆ ಹೇಳಿದೆನು. ಅವನು ಪ್ರಾರ್ಥನೆಯನ್ನು ಪುನರಾವರ್ತಿಸುತ್ತಿದ್ದಂತೆ ಅವನು ಮಾತನಾಡಲು ಪ್ರಯತ್ನಿಸುತ್ತಿದ್ದುದು ಮತ್ತು ನರಳುವುದು ನನಗೆ ಕೇಳಿಸುತ್ತಿತ್ತು. ನಾನು ಅವನೊಂದಿಗೆ ಪ್ರಾರ್ಥಿಸುತ್ತಿದ್ದಾಗ ನನಗೆ ಬಹಳ ಬಲವಾಗಿ ಪವಿತ್ರಾತ್ಮನ ಅನುಭವವಾಯಿತು.

ಅವನು ಈಗ ಯೇಸುವಿನೊಂದಿಗಿದ್ದಾನೆ ಎಂದು ನಾನು ಬಹಳ ಕೃತಜ್ಞಳಾಗಿದ್ದೇನೆ ಮತ್ತು ಆತನ ಭರವಸೆಗಳಿಗಾಗಿ ನಾನು ದೇವರಿಗೆ ಕೃತಜ್ಞಳಾಗಿದ್ದೇನೆ. ಸರ್, ನಿಮ್ಮ ಬೋಧನೆಗಳ ಮೂಲಕ ನಾನು ಧೈರ್ಯದಿಂದ ಜನರಿಗೆ ಸಾಕ್ಷಿ ಹೇಳಲು ಕಲಿತಿರುವುದಕ್ಕೆ ನಾನು ನಿಮಗೆ ಮತ್ತು ನಿಮ್ಮ ಮಿನಿಸ್ಟ್ರಿಗೆ ಬಹಳ ಕೃತಜ್ಞಳಾಗಿದ್ದೇನೆ. ನಾನು ನಿಮ್ಮನ್ನು ಬಹಳ ಪ್ರೀತಿಸುತ್ತೇನೆ. ನಿಮ್ಮ ಸೂಚನೆಗಳಿಗಾಗಿ ಮತ್ತು ಒಬ್ಬ ನಿಜವಾದ ಕ್ರೈಸ್ತಮತೀಯನಾಗಿ ನಿಮ್ಮ ಅದ್ಭುತ ಸಾಕ್ಷಿಗಾಗಿ ನಿಮಗೆ ಧನ್ಯವಾದಗಳು. ನಿಮ್ಮ ಮಿನಿಸ್ಟ್ರಿಯ ಭಾಗವಾಗಿರಲು ನನಗೆ ಹೆಮ್ಮೆಯಾಗುತ್ತದೆ. ಪ್ರಭುವಿಗೆ ಸ್ತೋತ್ರ ಮಾಡೋಣ.

ಸೂಜೆಟ್     ಸಾಂಟಾ ಕ್ಲಾರಿಟಾ, ಕ್ಯಾಲಿಫೋರ್ನಿಯಾ

## ಆರ್ಕಾನ್ಸಾಸ್

ಪ್ರಿಯ ಸರ್,

ನಾನು ಇದನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕೆಂದಿದ್ದೇನೆ. ಏಕೆಂದರೆ ನಾನು ಪ್ರಾರ್ಥಿಸುತ್ತಿದ್ದೆನು, ಮತ್ತು ಈ ಎಲ್ಲಾ ಸಂಕಟಗಳಾದ್ಯಂತ ಹಿಂಜಾರಿದ ನಮ್ಮ ಮಕ್ಕಳಿಗಾಗಿ ನಾನು ಉಪವಾಸ ಮಾಡುತ್ತೇನೆ ಮತ್ತು ಆಗಾಗ್ಗೆ ಪ್ರಾರ್ಥಿಸುತ್ತೇನೆ; ನಿಜ ಹೇಳಬೇಕೆಂದರೆ ಲೋಕದ ಎಲ್ಲಾ ಮಕ್ಕಳಿಗಾಗಿ ಪ್ರಾರ್ಥಿಸುತ್ತೇನೆ. ಏಕೆಂದರೆ ಅವರ ಬಗ್ಗೆ ನನ್ನ ಹೃದಯ ಬಹಳ ಭಾರವಾಗಿದೆ, ಏಕೆಂದರೆ ಅವರಿಗೆ ಸತ್ಯದ ಬಗ್ಗೆ ಜ್ಞಾನವೇ ಇಲ್ಲ.

ನಾನು ಜಾನತನ್ ಜೊತೆಯಲ್ಲಿ ಈಸ್ಟ್ ಕೋಸ್ಟಿನಲ್ಲಿದ್ದಾಗ ಹಲವಾರು ಕಾಲೇಜುಗಳಲ್ಲಿ ನಾವು ನಿಮ್ಮ ಸುವಾರ್ತೆಯ ಸಾಹಿತ್ಯವನ್ನು ಹಂಚುತ್ತಿದ್ದೆವು, ಮತ್ತು ಈ ಮಕ್ಕಳು (ನಾನು ಅವರನ್ನು ಮಕ್ಕಳು ಎಂದು ಕರೆಯುತ್ತೇನೆ – ನನಗೀಗ 60 ವರ್ಷ – ಆದರೆ ಅವರು ನಿಜವಾಗಿಯೂ ಯುವಕರು ಮತ್ತು ಯುವತಿಯರು) ನಮಗೆ ನಮ್ಮ ಬಗ್ಗೆ ಎಷ್ಟು ಜ್ಞಾಪಿಸುತ್ತಾರೆ – 60ರ ದಶಕದ ಪೀಳಿಗೆ – ನಮ್ಮಲ್ಲಿ ಹಲವರು ಆಗ ಹಿಪ್ಪಿಗಳಂತೆ ಅಲೆಯುತ್ತಿದ್ದರು; ಇಂದು ಈ ಯುವ ಜನರು ನಮ್ಮ ಹಾಗೆಯೇ ಕಳೆದುಹೋಗಿದ್ದಾರೆ ಮತ್ತು ಚಿಂತೆಯಲ್ಲಿದ್ದಾರೆ ಮತ್ತು ಹುಡುಕುತ್ತಿದ್ದಾರೆ. ಅವರು ಕಂಪ್ಯೂಟರ್ ಯುಗದಲ್ಲಿ ಜನಿಸಿದ್ದಾರೆ, ಮತ್ತು ಅವರ ಪಲಾಯನಗಳು ಹಾಗೂ ಹುಡುಕಾಟ ಬೇರೆ ರೀತಿಯಲ್ಲಿ ನಡೆಯುತ್ತದೆ, ಅಷ್ಟೆ.

ಸೂಸಿ, ಒಂದು ಸಂದೇಶದಲ್ಲಿ ಕೊನೆಯ ಬಾರಿ ಕಳೆದುಹೋದ ಆತ್ಮಗಳ ಉಳಿಕೆಗಳನ್ನು ಸೆರೆಹಿಡಿಯುವ ಸೈನಿಕ ಪಡೆಯನ್ನು “ಜೊಎಲ್’ಸ್ ಆರ್ಮಿ” ಎಂದು ಕರೆದುದು ನನಗೆ ನೆನಪಿದೆ. ವಿಯೆಟ್ನಾಮ್ ಯುದ್ಧವು ಜೋಎಲ್’ಸ್ ಆರ್ಮಿಯನ್ನು ಕೊಲ್ಲಲು ಸೈತಾನನ ಒಂದು ಕುತಂತ್ರ ಎಂದು ಆಕೆ ಹೇಳಿದರು. ನಾನು ಈ ಸಮಯದಲ್ಲಿ ಏನು ಆಲೋಚಿಸುತ್ತಿದ್ದೆ, ಪ್ರಾರ್ಥಿಸುತ್ತಿದ್ದೆ ಎಂದರೆ ದೇವರು ತನಗಾಗಿ ಒಂದು ದೊಡ್ಡ ಸ್ವಚ್ಛತಾ ಕಾರ್ಯವನ್ನು ನಡೆಸಲು ನಿಮ್ಮನ್ನು ಮತ್ತು ಸೂಸಿ ಅವರನ್ನು ಕರೆಸಿದರು, ಮತ್ತು ಸುವಾರ್ತೆಯು ಜಗತ್ತಿನಾದ್ಯಂತ ಹೇಗೆ ಹರಡಿತು ಎಂದರೆ ಅಂದಿನಿಂದ ಲೋಕವು ಹಿಂದಿನಂತೆ ಉಳಿದಿಲ್ಲ ಎಂಬುದು ನನ್ನ ನಂಬಿಕೆ. ಒಂದಲ್ಲಾ ಒಂದು ರೂಪದಲ್ಲಿ, ಹೆಚ್ಚಿನ ಜನರು ಸುವಾರ್ತೆಯನ್ನು ಕೇಳಿದರು ಮತ್ತು ನಿರ್ಧಾರಗಳನ್ನು ಕೈಗೊಳ್ಳಲಾಯಿತು, ಮತ್ತು ಇಂದು ನಮಗೆ ಈ ನಿರ್ಧಾರಗಳ ಪರಿಣಾಮದ ಅನುಭವವಾಗುತ್ತಿದೆ ಎಂದು ನನಗನಿಸುತ್ತದೆ. ಆ ಸಮಯದಲ್ಲಿ ನಿರಾಕರಿಸಿದವರು ತಮ್ಮ ದಾರಿ ಹಿಡಿದು ಹೋದರು ಮತ್ತು ದೇವರಿಲ್ಲದ ಈ ಮನೆಗಳಲ್ಲಿ ಮಕ್ಕಳು ಹುಟ್ಟಿದರು, ಆ ಮಕ್ಕಳು ಬೆಳೆದು ಅವರಿಗೆ ಮಕ್ಕಳಾದರು, ಮತ್ತು ಇಂದು ನಾವು ನೋಡುತ್ತಿರುವುದು ಅದೇ ಪೀಳಿಗೆಯನ್ನು. ವಾಸ್ತವತೆ ಏನು, ದೇವರು ಯಾರು, ಅವರು ಇಲ್ಲೇಕೆ ಇದ್ದಾರೆ, ಮತ್ತು ಅವರು ಹುಟ್ಟಿರುವ ಈ ಗ್ರಹದ ಮೇಲಿರುವ ಈ ಭೀಕರ ಅವ್ಯವಸ್ಥೆಗೆ ಏನಾಗಲಿದೆ ಎಂಬುದರ ಬಗ್ಗೆ ಅವರ ಬದುಕುಗಳಲ್ಲಿ ಸ್ವಲ್ಪವೂ ಸುಳಿವಿಲ್ಲ. ನಿಮ್ಮನ್ನು ಬಂಧನದಲ್ಲಿಡಲು ಇದೇ ನಿಜವಾದ ಕಾರಣ – ಯೇಸು ಬೇಗನೆ ಹಿದಿರುಗುತ್ತಿದ್ದಾರೆ ಎಂಬ ಸತ್ಯವನ್ನು ನೀವು ಹೇಳುವುದನ್ನು ತಡೆಯಲು ಪ್ರಯತ್ನಿಸುತ್ತಿದ್ದಾರೆ.

ಮತ್ತು ಕೊನೆಯಲ್ಲಿ, ಪ್ರಭು ಬರುವುದನ್ನು ಮುಂದೂಡಿದರೆ ಏನು ಗತಿ ಎಂದು ನಾನು ಪ್ರಾರ್ಥಿಸುತ್ತಿದ್ದಾಗ ಆಲೋಚಿಸುತ್ತಿದ್ದೆ. ಕಳೆದುಹೋದ ಈ ಮನುಷ್ಯರು ಮಕ್ಕಳನ್ನು ಪಡೆಯುವುದನ್ನು ಮತ್ತು ಹಾಗೆಯೇ ಮುಂದುವರಿಯುವುದನ್ನು ನೀವು ಕಲ್ಪನೆ ಮಾಡಬಲ್ಲಿರಾ? ಈ “ಯುನೈಟೆಡ್ ಸ್ಟೇಟ್ಸ್”, ಎಷ್ಟು ದೈವಹೀನ, ಎಷ್ಟು ಸ್ವಾರ್ಥಿ ಮತ್ತು ಸ್ವಾರ್ಥಾನ್ವೇಷಕ, ತಮ್ಮ ದೈವಹೀನ ಬದುಕುಗಳನ್ನು ಬಾಳಲು ಏನನ್ನಾದರೂ ಮಾಡುತ್ತಾರೆ, ಮತ್ತು ಪ್ರಕಟನೆಯ ಜಾರಸ್ತ್ರೀಯಾಗಿರುವ , ವ್ಯಾಟಿಕನ್-ಒಂದು-ವಿಶ್ವ ಮೃಗ ಸರ್ಕಾರ ಮತ್ತು ಚರ್ಚಿನ ಆಯ್ಕೆಗೆ ಪಕ್ವವಾಗಿದ್ದಾರೆ. ಮತ್ತು ಮೃಗದ ಗುರುತಿಗಾಗಿ ರಂಗ ಸಜ್ಜಾಗಿದೆ.

ಪರಲೋಕದಿಂದ ಭೂಮಿಗೆ ನೀವು ತಂದ ಬೆಳಕಿಗಾಗಿ, ಮತ್ತು ನೀವು ನಮ್ಮ ಪ್ಯಾಸ್ಟರ್ ಆಗಿರುವುದಕ್ಕಾಗಿ ನಿಮಗೆ ಧನ್ಯವಾದಗಳು. ನೀವು ಬೋಧಿಸುವ ಸುವಾರ್ತೆಗಾಗಿ ಬದುಕಲು ಮತ್ತು ಸಾಯಲು ನಮಗೆ ಹೆಮ್ಮೆಯಾಗುತ್ತದೆ. ನಾವು ನಿಮ್ಮನ್ನು ಪ್ರೀತಿಸುತ್ತೇವೆ, ಪ್ಯಾಸ್ಟರ್ ಟೋನಿ. ದೇವರು ನಿಮ್ಮ ಮೇಲೆ ನಿಲ್ಲದ ಅನುಗ್ರಹಗಳ ಮಳೆಗರೆಯಲಿ ಮತ್ತು ನಿಮಗೆ ಈಗ ಬಿಡುಗಡೆ ತರಲಿ.

ಯೇಸುವಿನ ಹೆಸರಿನಲ್ಲಿ. ಆಮೆನ್.

ಸಹೋದರಿ ಶೆಲ್ಲಿ     ಫೋರ್ಟ್ ಸ್ಮಿತ್, ಆರ್ಕಾನ್ಸಾಸ್



ಅಲಾಮೊ ಮಿನಿಸ್ಟ್ರೀಸ್ ಆನ್ಲೈನ್

www.alamoministries.com

https://twitter.com/tonyalamominist

https://www.youtube.com/user/PastorTonyAlamo

https://www.facebook.com/pages/TONY-ALAMO-Christian-Ministries/729439147079523?fref=ts

# ಸಂಕಟ ಆರಂಭವಾಗಿದೆ

(ಪುಟ 2 ರಿಂದ ಮುಂದುವರಿದಿದೆ)

ಗೆ ಸರಿಯಾಗಿರಿ! ಈ ಪ್ರಾರ್ಥನೆಯನ್ನು ಹೇಳುವ ಮೂಲಕ ಪ್ರಾರಂಭಿಸಿ:

ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[7] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬುತ್ತೇನೆ.[8] ಆತನು ಶಿಲುಬೆಯ ಮರಣ ಹೊಂದಿದನು ಮತ್ತು ನನ್ನ ಹಿಂದಿನ ಎಲ್ಲಾ ಪಾಪಗಳ ಕ್ಷಮಾಪಣೆಗಾಗಿ ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬುತ್ತೇನೆ.[9] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[10] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬುತ್ತೇನೆ.[11] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[12] ಕಾಲ್ವಾರಿಯ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿರಿ.[13] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ. ನನಗೆ ಗೊತ್ತು, ಏಕೆಂದರೆ ನಿಮ್ಮ ವಾಕ್ಯವಾದ ಬೈಬಲ್ ಹೀಗೆಂದು ಹೇಳುತ್ತದೆ.[14] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ವಾಕ್ಯ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[15] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ.[16] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಂಡು ಮತ್ತು ಇನ್ನು ಮೇಲೆ ಪಾಪ ಮಾಡದೆ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[17]

---

ರಕ್ಷಣೆಯ ನಂತರ, ಯೇಸುವು ತಂದೆಯ, ಮಗನ, ಮತ್ತು ಪವಿತ್ರಾತ್ಮದ ಹೆಸರಿನಲ್ಲಿ ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ ದೀಕ್ಷಾಸ್ನಾನ ಪಡೆದರು.[18] ಬೈಬಲ್ ಸೊಸೈಟಿ ಆಫ್ ಇಂಡಿಯಾದ 'ಸತ್ಯವೇದವು" [ಇಂಗ್ಲೀಷ್ ನ ಕೆಜೆವಿ] ಬೈಬಲ್ ಅನ್ನು ಓದಿ, ಮತ್ತು ನಿಮ್ಮ ಪ್ರಯೋಜನಕ್ಕಾಗಿ ಹಾಗೂ ಇತರರ ಪ್ರಯೋಜನಕ್ಕಾಗಿ ಅದು ಹೇಳಿದ್ದನ್ನು ಮಾಡಿ.[19]

ಕ್ರಿಸ್ತರು ಮತ್ತು ದೇವರಾದ ತಂದೆ ಈಗ ಪವಿತ್ರಾತ್ಮರ ಮೂಲಕ ನಿಮ್ಮಲ್ಲಿ ನೆಲೆಗೊಂಡಿದ್ದಾರೆ. ದೇವರ ದೈವಿಕ ಸ್ವರೂಪದ ಪೂರ್ಣ ಪ್ರಮಾಣವನ್ನು ಹೊಂದಲು ನಿಮಗೊಂದು ದಾರಿಯಿದೆ. ದೇವರ ದೈವಿಕ ಸ್ವರೂಪವು ನಮ್ಮಲ್ಲಿ ಹೆಚ್ಚು ಹೆಚ್ಚು ನೆಲೆಗೊಂಡಂತೆಲ್ಲಾ ಸಹಸ್ರಾರು ಕ್ರೈಸ್ತರು ಸುಲಭವಾಗಿ ರಕ್ಷಣೆಯಿಂದ ವಿಮುಖರಾಗುವಂತೆ ಮಾಡಿದ ಶೋಧನೆಗಳ ವಿರುದ್ಧ ಹೋರಾಡಲು ನಿಮ್ಮನ್ನು ಹೆಚ್ಚು ಸಮರ್ಥರನ್ನಾಗಿ ಮಾಡುತ್ತದೆ. ಪವಿತ್ರಾತ್ಮದಿಂದ ದೀಕ್ಷಾಸ್ನಾನ ಪಡೆಯುವುದಕ್ಕಾಗಿ ಪ್ರಾರ್ಥಿಸಿ. ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೇಗೆ ಪಡೆಯುವುದು ಎಂಬ ಕುರಿತ ಸೂಚನೆಗಳನ್ನು ಮತ್ತು ದೇವರ ಪವಿತ್ರ ಸ್ವರೂಪವನ್ನು ಪಡೆಯಲು ನಮ್ಮ ಸಾಹಿತ್ಯಕ್ಕಾಗಿ ವಿಚಾರಿಸಿ ಅಥವಾ ಕರೆಮಾಡಿ. ಏಕೆಂದರೆ ಪವಿತ್ರತೆಯಿಲ್ಲದೆ, ಯಾವೊಬ್ಬನೂ ದೇವರನ್ನು ಕಾಣಲಾರನು (ಇಬ್ರಿಯರಿಗೆ 12:14)

ರಕ್ಷಣೆಯ ಬಗ್ಗೆ ನೀವು ಇತರರಿಗೆ ತಿಳಿಸಬೇಕೆಂದು ಪ್ರಭು ಬಯಸುತ್ತಾರೆ. ನೀವು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತೆಯ ಸಾಹಿತ್ಯದ ವಿತರಕರಾಗಬಹುದು. ನಾವು ನಿಮಗೆ ಸಾಹಿತ್ಯವನ್ನು ಯಾವುದೇ ಶುಲ್ಕವಿಲ್ಲದೆ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ ಯೇಸು ಆದೇಶಿಸುವಂತೆ ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, "ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನಿನ್ನಿಂದ ಏನು ಕದ್ದುಕೊಂಡಿದ್ದೇವೆ ಎಂದು ಕೇಳುತ್ತೀರೋ? ದಶಾಂಶ, ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಾಂಶವನ್ನು [ದಶಾಂಶ ಎಂದರೆ ನಿಮ್ಮ ಒಟ್ಟು ಆದಾಯದ 10%] ಯಾವತ್ತೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವದು; ಇದು ಸೇನಾಧೀಶ್ವರ ಯೆಹೋವನ ನುಡಿ" (ಮಲಾಕಿಯ 3:8-12).

---

**7** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **8** ಮತ್ತಾಯ 26:63-64, 27:54, ಲೂಕ 1:30-33, ಯೋಹಾನ 9:35-37, ರೋಮಾಪುರದವರಿಗೆ 1:3-4 **9** ಅಪೋಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನ 1:7, ಪ್ರಕಟನೆ 5:9 **10** ಕೀರ್ತನೆಗಳು 16:9-10, ಮತ್ತಾಯ 28:5-7, ಮಾರ್ಕ 16:9, 12, 14, ಯೋಹಾನ 2:19, 21, 10:17-18, 11:25, ಅಪೋಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **11** ಲೂಕ 22:69, ಅಪೋಸ್ತಲರ ಕೃತ್ಯಗಳು 2:25-36, ಇಬ್ರಿಯರಿಗೆ 10:12-13 **12** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **13** ಎಫೆಸದವರಿಗೆ2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನ 1:7, ಪ್ರಕಟನೆ 1:5, 7:14 **14** ಮತ್ತಾಯ 26:28, ಅಪೋಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ 1:7, ಕೊಲೊಸ್ಸೆಯವರಿಗೆ 1:14 **15** ಮತ್ತಾಯ 21:22, ಯೋಹಾನ 6:35, 37-40, ರೋಮಾಪುರದವರಿಗೆ 10:13 **16** ಇಬ್ರಿಯರಿಗೆ 11:6 **17** ಯೋಹಾನ 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **18** ಮತ್ತಾಯ 28:18-20, ಯೋಹಾನ 3:5, ಅಪೋಸ್ತಲರ ಕೃತ್ಯಗಳು 2:38, 19:3-5 **19** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವ 1:8, 22:5, 2 ತಿಮೊಥೆಯನಿಗೆ 2:15, 3:14-17, ಯಾಕೋಬನು 1:22-25, ಪ್ರಕಟನೆ 3:18

---

ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**
**24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: +1 (661) 252-5686 • Fax +1 (661) 252-4362**
**www.alamoministries.com • taoffice@alamoministries.com**

ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿ ರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್‌ವೈಡ್ ಸ್ಥಳ ಒದಗಿಸುತ್ತದೆ.

ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ಸಂಜೆ 8 ಗಂಟೆಗೆ ಮತ್ತು ಇತರ ಸ್ಥಳಗಳಲ್ಲಿ ರಾತ್ರಿ ವೇಳೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಗಿನ ಸಂಖ್ಯೆಗೆ ಕರೆ ಮಾಡಿ. (908) 937-5723.

333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.

*ಲಾಸ್ ಏಂಜಲಿಸ್ ಚರ್ಚ್ ಪ್ರದೇಶ:* 13136 *ಸಿಯೆರಾ ಹೈವೇ, ಸಾಂಟಾ ಕ್ಲಾರಿಟಾ, ಕ್ಯಾಲಿಫೋರ್ನಿಯಾ* 91390 (661) 251-9424 *ದಲ್ಲಿ ಪ್ರತಿ ಸಂಜೆ* 8 *ಗಂಟೆಗೆ ಮತ್ತು ಭಾನುವಾರದಂದು ಮಧ್ಯಾಹ್ನ* 3 *ಗಂಟೆಗೆ ಮತ್ತು ರಾತ್ರಿ* 8 *ಗಂಟೆಗೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು.*

*ಉಚಿತ ವಾಹನ ಸೇವೆಯನ್ನು ಹಾಲಿವುಡ್ ಬೂಲೆವಾರ್ಡ್ ಮತ್ತು ಹೈಲ್ಯಾಂಡ್ ಅವೆನ್ಯೂ, ಹಾಲಿವುಡ್, ಕ್ಯಾಲಿಫೋರ್ನಿಯಾದ ಮೂಲೆಯಿಂದ ಪ್ರತಿ ಸಂಜೆ* 6.30 *ಕ್ಕೆ, ಭಾನುವಾರಗಳಂದು ಮಧ್ಯಾಹ್ನ* 1.30 *ಕ್ಕೆ ಮತ್ತು ಸಂಜೆ* 6.30 *ಕ್ಕೆ ಒದಗಿಸಲಾಗುವುದು.*

*ಪ್ರತಿಯೊಂದು ಪ್ರಾರ್ಥನಾ ಸಭೆಯ ನಂತರ ಊಟದ ವ್ಯವಸ್ಥೆ ಮಾಡಲಾಗುವುದು.*

ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೋಸ್ತಲರ ಕೃತ್ಯಗಳು 4:12).

ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.

ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:
© Copyright August 2015 All rights reserved World Pastor Tony Alamo ® Registered August 2015

KANNADA—VOLUME 21900—*THE TRIBULATION HAS BEGUN*